# ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

## ನವನಗರ ಹುಬ್ಬಳ್ಳಿ-580025

ಕ್ರ.ಸಂ:ಹುಧಾನಪ್ರಾ:ಸಿ.ಎ. ನಿ.ಹಂಚಿಕೆ:2026-27 ದಿನಾಂಕ 25.08.2026

## ಪ್ರಕಟಣೆ

## ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಈ ಕೆಳಕಂಡ ಖಾಸಗಿ ಬಡಾವಣೆಗಳಲ್ಲಿರುವ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ನಿವೇಶನಗಳು (30 ವರ್ಷಗಳ ಗುತ್ತಿಗೆ ಆಧಾರದ ಮೇಲೆ) ಹಂಚಿಕೆಗಾಗಿ ಲಭ್ಯವಿರುತ್ತವೆ. ಸದರಿ ನಾಗರೀಕ ಸೌಲಭ್ಯದ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಹಂಚಿಕೆ ಮಾಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಸಾರ್ವಜನಿಕ ಉಪಯೋಗ (ನಾಗರೀಕ ಸೌಲಭ್ಯ) ನಿವೇಶನಗಳ ಹಂಚಿಕೆ ನಿಯಮ 1991 ರ ಪ್ರಕಾರ ಅರ್ಹ ನೋಂದಾಯಿತ ಸಂಘ ಸಂಸ್ಥೆಗಳು/ಕೇಂದ್ರ/ರಾಜ್ಯ/ಅರೆ ಸರ್ಕಾರಿ, ನಿಗಮ ಮಂಡಳಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಅ ನಂ | ಗ್ರಾಮ | ರಿಸನಂ/ಬ್ಲಾಕ ನಂ. | ನಿವೇಶನ ಸಂಖ್ಯೆ | ಒಟ್ಟು ವಿಸ್ತೀರ್ಣ ಚ.ಮೀ. ಗಳಲ್ಲಿ | ರೂ.ಪ್ರತಿ ಚ.ಮೀ ಗಳಲ್ಲಿ | ಉದ್ದೇಶ ಅರ್ಜಿದಾರರ ಮನವಿ | ಗುತ್ತಿಗೆ ಮೊಬಲಗು ರೂ.ಗಳಲ್ಲಿ | ಭರಿಸಬೇಕಾದ ನೋಂದಣಿ ಶುಲ್ಕ | ಶೇ.10 ರಂತೆ ಭರಿಸಬೇಕಾದ ಪ್ರಾರಂಭಿಕ ಠೇವಣಿ ರೂ. | ಮೀಸಲು |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಗೋಪನಕೊಪ್ಪ | 138/1ಅ+1ಬ ಹಾಗೂ 138/2/1 | 156 | 1883.09 | 8000 | ಸಾಮಾಜಿಕ/ ಸಮುದಾಯ ಭವನ | 1,50,64,720 | 2000 | 15,06,472 | |
| 2 | ಕೇಶ್ವಾಪೂರ | 57/2ಬ,57/2, 57/2ಕ | 94 | 1114.76 | 11000 | ಸಾಮಾಜಿಕ | 1,22,62,360 | 2000 | 12,26,236 | |
| 3 | ಕೇಶ್ವಾಪೂರ | 59/3,59/6+7 ಅ | 83 | 784.08 | 11000 | ಸಾಮಾಜಿಕ | 86,24,880 | 1000 | 8,62,488 | |
| 4 | ಕೇಶ್ವಾಪೂರ | 35/1 | 01 | 1144.65 | 11000 | ಧಾರ್ಮಿಕ | 1,25,91,150 | 2000 | 12,59,115 | |
| 5 | ಕೇಶ್ವಾಪೂರ | 59/3,59/6+7 ಅ | 84 | 359.60 | 11000 | ಧಾರ್ಮಿಕ | 39,55,600 | 1000 | 3,95,560 | |
| 6 | ಕೇಶ್ವಾಪೂರ | 63ಬ | 156 | 1259.88 | 10000 | ಸಾಮಾಜಿಕ | 1,25,98,800 | 2000 | 12,59,880 | |
| 7 | ಕೇಶ್ವಾಪೂರ | 42/2+10+11+ 12+13+14, 57/4+5+6 & 43/2 | 145 | 2547.59 | 11000 | ಸಾಂಸ್ಕೃತಿಕ | 2,80,23,490 | 5000 | 28,02,349 | |
| 8 | ಕೇಶ್ವಾಪೂರ | 38/1+2/ಅ+ಬ /3ಅ/1+2 | 16 | 320.90 | 11000 | ಧಾರ್ಮಿಕ | 35,29,900 | 1000 | 3,52,990 | |
| 9 | ಕೇಶ್ವಾಪೂರ | 33/ಬ | 71 | 897.75 | 11000 | ಶೈಕ್ಷಣಿಕ ವಸತಿ ನಿಲಯ | 98,75,250 | 1000 | 9,87,525 | |
| 10 | ಉಣಕಲ್ಲ | 79/1+2 | 341 | 5684.02 | 6800 | ಶೈಕ್ಷಣಿಕ | 3,86,51,336 | 7000 | 38,65,134 | |

...2

| 1 | 2 | 3 | 4 | 5 | 6 | 7 | 8 | 9 | 10 | 11 |
|---|---|---|---|---|---|---|---|---|---|---|
| 11 | ಅಯೋಧ್ಯಾ | 160ಬ+163 | 225 | 4555.00 | 9000 | ಶೈಕ್ಷಣಿಕ | 4,09,95.000 | 7000 | 40,99,500 | |
| 12 | ಬೆಂಗೇರಿ | 86/1 | 15 | 1742.10 | 7000 | ಸಾಮಾಜಿಕ | 1,21,94,700 | 2000 | 12,19,470 | |
| 13 | ಬೆಂಗೇರಿ | 40/3+10+11 | 118 | 1888.83 | 7000 | ಶೈಕ್ಷಣಿಕ | 1,32,21,810 | 2000 | 13,22,181 | |
| 14 | ಬಮ್ಮಾಪೂರ | 54/2 | 46 | 607.03 | 5000 | ಸಮುದಾಯ ಭವನ | 30,35,150 | 1000 | 3,03,515 | |
| 15 | ಬಮ್ಮಾಪೂರ | 63ಅ+64 | 230 | 1489.24 | 5000 | ಸಾಮಾಜಿಕ | 74,46,200 | 2000 | 74,46,20 | |
| 16 | ಗಬ್ಬೂರ | 67/6,68/1, 68/2+4 | 156 | 1881.94 | 7000 | ಸಾಮಾಜಿಕ | 1,31,73,580 | 2000 | 13,17,358 | |
| 17 | ರಾಯನಾಳ | 85/2 | 103 | 492.21 | 10000 | ಸಾಂಸ್ಕೃತಿಕ | 49,22,100 | 1000 | 4,92,210 | ಪ.ಜಾ |
| 18 | ನವಲೂರ | 11/1+2+4+5 | 36 | 450.66 | 8000 | ಸಾಮಾಜಿಕ | 36,05,280 | 1000 | 3,60,528 | |
| 19 | ಯತ್ತಿನಗುಡ್ಡ | 114/1+2+3+4 +115/1+2+3 +4+5+116/1 +2 | 381 | 5424.75 | 6500 | ಸಮುದಾಯ ಭವನ/ವಿ ದ್ಯಾರ್ಥಿ ನಿಲಯ | 3,52,60,875 | 7000 | 35,26,088 | |
| 20 | ಬೇಲೂರ | 116/1 | 89 | 379.52 | 5000 | ಸಾಮಾಜಿಕ | 18,97,600 | 1000 | 1,89,760 | ಪ.ಜಾ |
| 21 | ತಡಸಿನಕೊಪ್ಪ | 95 | 93 | 961 | 6500 | ಸಾಮಾಜಿಕ | 62,46,500 | 1000 | 6,24,650 | ಪ.ಪಂ |
| 22 | ಕು.ನರೇಂದ್ರ | 50,51/1 | 49 | 703.33 | 4500 | ಆರೋಗ್ಯ | 31,64,985 | 1000 | 3,16,499 | ಪ.ಪಂ |
| 23 | ನರೇಂದ್ರ | 316/317/2/31 8/319/320/2+ 3 | 130 | 1377.23 | 4500 | ಶಿಶು ಮಂದಿರ | 61,97,535 | 2000 | 6,19,754 | |
| 24 | ದೊಡ್ಡನಾಯ್ಕ ನಕೊಪ್ಪ | 44/ಅ1/1ಅ+1 ಬ&44/ಅ/4 | 39 | 707.43 | 11000 | ಸಾಮಾಜಿಕ | 77,81,730 | 1000 | 7,78,173 | |
| 25 | ದೊಡ್ಡನಾಯ್ಕ ನಕೊಪ್ಪ | 30/1ಕ/11 | 2 | 202.50 | 8000 | ಸಾಮಾಜಿಕ | 16,20,000 | 1000 | 1,62,000 | ಪ.ಜಾ |
| 26 | ಧಾರವಾಡ ವಿ | 436/2 | 40 | 511.50 | 7000 | ಸಮುದಾಯ ಭವನ/ ಸಾಮಾಜಿಕ | 35,80,500 | 1000 | 3,58,050 | |
| 27 | ಕೆಲಗೇರಿ | 48/1ಕ,48/1ಡ, 48/1ಇ, 48/1ಗ,48/1ಪ, 48/1ಹ | 84 | 1143.48 | 6500 | ಶೈಕ್ಷಣಿಕ | 74,32,620 | 2000 | 7,43,262 | |
| 28 | ಕೆಲಗೇರಿ | 14+17/2+18/ 1+2+19/2+20 /5+6+7+21/3 | 116 | 751.55 | 6500 | ಸಾಮಾಜಿಕ /ಸಮುದಾಯ ಭವನ | 48,85,075 | 1000 | 4,88,508 | ಪ.ಜಾ |
| 29 | ಕೆಲಗೇರಿ | 40/1 | 28 | 546.66 | 6500 | ಸಾಮಾಜಿಕ | 35,53,290 | 1000 | 3,55,329 | |
| 30 | ಹಿರೇಮಲ್ಲಿಗ ವಾಡ | 63/ಎ,63/ಬಿ, 63/ಕೆ | 43 | 899.58 | 6500 | ಆರೋಗ್ಯ | 58,47,270 | 1000 | 5,84,727 | ಪ.ಜಾ |

**ಸೂಚನೆ:**

1) ನಿಗಧಿತ ನೋಂದಣಿ ಅರ್ಜಿ ನಮೂನೆ-1 ಮತ್ತು ಸಿ. ಎ. ನಿವೇಶನ ಮಂಜೂರಾತಿ ಅರ್ಜಿ ನಮೂನೆ-2 ಇವುಗಳನ್ನು **ದಿನಾಂಕ 27.08.2026** ರಿಂದ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ರೂ.1,000/- ಶುಲ್ಕ ಪಾವತಿಸಿ ಪಡೆಯುವುದು.
2) ಕೇಂದ್ರ/ರಾಜ್ಯ/ಅರೆ ಸರ್ಕಾರಿ/ನಿಗಮ ಮಂಡಳಿಗಳು ಸಿ.ಎ. ನಿವೇಶನಗಳಿಗಾಗಿ ಕೋರಿದ/ಅರ್ಜಿ ಸಲ್ಲಿಸಿದಲ್ಲಿ ಮೊದಲ ಆದ್ಯತೆ ನೀಡಲಾಗುವುದು.

3) ಅರ್ಹ ಸಂಘ ಸಂಸ್ಥೆಗಳು ಕಾಲಂ (9) ಮತ್ತು (10) ರಲ್ಲಿ ನಿಗಧಿಪಡಿಸಿರುವ ನೋಂದಣಿ ಶುಲ್ಕ ಹಾಗೂ 10% ಪ್ರಾರಂಭಿಕ ಠೇವಣಿ ಮೊತ್ತದೊಂದಿಗೆ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ ಕೆನರಾ ಬ್ಯಾಂಕ ನವನಗರ, ಹುಬ್ಬಳ್ಳಿ ಶಾಖೆಯ Fund-4, Account No. 110138622224 IFSC Code-CNRB0003865 ನೇದ್ದಕ್ಕೆ ಸಂದಾಯವಾಗುವಂತೆ ಅಥವಾ ಖರೀದಿಸಲಾದ ಡಿ.ಡಿ/ ನಿಗಧಿತ ಫಾರಂನೊಂದಿಗೆ ಸಲ್ಲಿಸುವುದು.

4) ಸಿ.ಎ. ನಿವೇಶನ ಹಂಚಿಕೆ ಪತ್ರ ನೀಡಿದ 90 ದಿವಸದೊಳಗಾಗಿ ಬಾಕಿ ಮೊತ್ತವನ್ನು ಸಂದಾಯ ಮಾಡುವುದು ಒಂದು ವೇಳೆ ನಿಗಧಿಪಡಿಸಿದ ಅವಧಿಯೊಳಗಾಗಿ ಬಾಕಿ ಮೊತ್ತವನ್ನು ಸಂದಾಯ ಮಾಡದೇ ಇದ್ದಲ್ಲಿ ನಂತರ 12% ಬಡ್ಡಿಯೊಂದಿಗೆ 60 ದಿವಸದೊಳಗಾಗಿ ಬಾಕಿ ಮೊತ್ತವನ್ನು ಸಂದಾಯ ಮಾಡುವುದು. ಈ ಅವಧಿಯಲ್ಲಿಯೇ ಬಾಕಿ ಮೊತ್ತವನ್ನು ಸಂದಾಯ ಮಾಡದೇ ಇದ್ದಲ್ಲಿ ಅರ್ಜಿಯೊಂದಿಗೆ ಭರಣ ಮಾಡಿದ 10% ಪ್ರಾರಂಭಿಕ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಹಂಚಿಕೆಯಾದ ಸಿ.ಎ. ನಿವೇಶನವನ್ನು ಯಾವುದೇ ಮುನ್ಸೂಚನೆ ನೀಡದೇ ನೇರವಾಗಿ ರದ್ದುಪಡಿಸಲಾಗುವುದು.

5) ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಮತ್ತು ದೋಷಪೂರಿತ ಸರಿಯಾದ ಮಾಹಿತಿ ನೀಡದ ಹಾಗೂ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

6) ಕಚೇರಿ ವೇಳೆಯಲ್ಲಿ ಮಂಜೂರಾತಿಗೆ ಪ್ರಕಟಿಸಿರುವ ನಿವೇಶನಗಳ ನಕ್ಷೆ ಪರಿಶೀಲಿಸಿ ಹೆಚ್ಚಿನ ವಿವರಗಳನ್ನು ಪ್ರಾಧಿಕಾರದ ಹಂಚಿಕೆ ಶಾಖೆಯಲ್ಲಿ ಪಡೆಯಬಹುದು.

7) ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಲು ಅನುಸರಿಸಬೇಕಾದ ನಿಯಮಗಳ ಅರ್ಹತೆ ಷರತ್ತುಗಳು ನಿಬಂಧನೆಗಳು ಮತ್ತು ಇತರೆ ವಿವರಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 1991 ನ್ನು ಪರಿಶೀಲಿಸಬಹುದು.

8) ನಿವೇಶನ ಹಂಚಿಕೆಯನ್ನು ಸ್ಥಳದಲ್ಲಿ ಲಭ್ಯವಿರುವ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗುವುದು. ಕ್ಷೇತ್ರದಲ್ಲಿ ವ್ಯತ್ಯಾಸವಾದಲ್ಲಿ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದು.

9) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991 ರ ಅಡಿಯಲ್ಲಿ 8(4) ರಲ್ಲಿ ಅವಕಾಶವಿರುವಂತೆ ಪ್ರಕರಣಗಳಲ್ಲಿನ ನಿವೇಶನಗಳಿಗೆ ಗುತ್ತಿಗೆ ಹಣದ ಶೇಕಡ 50 ರಷ್ಟು ದರಕ್ಕೆ ಹಂಚಿಕೆ ಮಾಡಲಾಗುವುದು.

   ಎ) ವಿಕಲ ಚೇತನರು ಹಾಗೂ ಬುದ್ಧಿಮಾಂದ್ಯರ ಕಲ್ಯಾಣಕ್ಕಾಗಿ ಸ್ಥಾಪಿಸಲಾಗಿರುವ ಸಂಸ್ಥೆಗಳು.

   ಬಿ) ಕೇವಲ ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು.

   ಸಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಇಲಾಖೆಗಳು ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ನಿಗಮ ಅಥವಾ ಯಾವುದೇ ಸಂಸ್ಥೆ.

   ಡಿ) ಪ.ಜಾತಿ/ಪ.ಪಂಗಡ ಸಂಘ-ಸಂಸ್ಥೆಗಳಿಗೆ.

10) ಯಾವುದೇ ನಿವೇಶನವನ್ನು ಉಪವಿಭಾಗ ಮಾಡಿ ಹಂಚಿಕೆ ಮಾಡುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿರುತ್ತದೆ. ಸಂಘ ಸಂಸ್ಥೆಗಳು ಈ ಕೆಳಗಿನ (ಎ ದಿಂದ ಎಫ್) ವರೆಗಿನ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕಾದ **ಕೊನೆಯ ದಿನಾಂಕ 10.09.2026** ರಂದು **ಸಾಯಂಕಾಲ 4:00** ಗಂಟೆವರೆಗೆ ಮಾತ್ರ ಸ್ವೀಕರಿಸಲಾಗುವುದು ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಿಸುವುದಿಲ್ಲ.

11) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991 ರ 3(2) ರ ಅಡಿಯಲ್ಲಿ ಬೇರೆ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು.

12) ಹಂಚಿಕೆಯಾದ ಸಿ.ಎ. ನಿವೇಶನದ ಆಸ್ತಿ ತೆರಿಗೆ ರೂ. 500/- ಗಳನ್ನು ಪ್ರತಿ ವರ್ಷ ಹಂಚಿಕೆ ಪಡೆದವರು ಭರಿಸತಕ್ಕದ್ದು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮ 1991 ರ 7(1) ರಲ್ಲಿಯ

ಎ) ಸಂಘದ ಉದ್ದೇಶ ಹಾಗೂ ಚಟುವಟಿಕೆಗಳ ವಿವರ, ಸಂಘದ ನೋಂದಾಯಿಸಿದ ಬಗ್ಗೆ ದಾಖಲೆ ಹಾಗೂ ಧ್ಯೆಯೋದ್ದೇಶಗಳು/ಬೈಲಾ.

ಬಿ) ಸಂಘದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿ.

ಸಿ) ಸಂಸ್ಥೆಯು ಈಗ ಇರುವಂತಹ ಸ್ಥಳ:

ಡಿ) ನಾಗರೀಕ ಸೌಲಭ್ಯಗಳುಳ್ಳ ನಿವೇಶನಗಳನ್ನು ಹಂಚಿಕೆ ಮಾಡುವುದರಿಂದ ಸಾಮಾಣ್ಯ ಸಾರ್ವಜನಿಕ ಪ್ರದೇಶದ ನಾಗರೀಕರಿಗೆ ದೊರಕಬಹುದಾದ ಪ್ರಯೋಜನಗಳು:

ಇ) 3 ವರ್ಷದ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಇತ್ಯಾದಿಗಳಲ್ಲಿ ಶೃತಪಡಿಸಿದಂತೆ ಸಂಸ್ಥೆಯ ಪ್ರಾಮಾಣಿಕತೆ ಮತ್ತು ನಿಸ್ಪೃಹತೆ:

ಎಫ) ಪ್ರಶ್ನಿತ ನಾಗರಿಕ ಸೌಲಭ್ಯವನ್ನು ವಿಸ್ತರಿಸುವಲ್ಲಿ ಸಂಸ್ಥೆಗೆ ಅಗತ್ಯವಿರುವ ನಾಗರಿಕ ಸೌಲಬ್ಯಗಳ ನಿವೇಶನದ ಅಗತ್ಯ.

ಸಹಿ/-
(ದೇವರಾಜ. ಆರ್)
ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ

ಸಹಿ/-
(ಶಾಕೀರ ಸನದಿ)
ಅಧ್ಯಕ್ಷರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ